

# ಮೌನ ಮಂಟಪ

■ ಡಿ.ಎನ್.ಗೀತಾ

## ಜೋಡಿ ಕೊಲೆ; ಹಾಸ್ಟೆಲ್ ತಲ್ಲಣ

‘ರಮ್ಯ….ಪ್ಲೀಸ್, ಚಿಕ್ಕಮ್ಮನ ಬಗ್ಗೆ ಏನೂ ಮಾತಾಡ್ಬೇಡ, ಬಂಗಲೆಗೆ ನನ್ನ ಹೊಸ ಅಮ್ಮನಾಗಿ ಬಂದ ಅವಳ ಕಣ್ಣಲ್ಲಿ ನಾನು ಪ್ರೀತಿಯನ್ನಲ್ಲದೆ ಇನ್ನೇನೂ ನೋಡಿಲ್ಲ, ಒಂದ್ವೇಳೆ….ನೀನು ಹೇಳಿದಂತೆ ಚಿಕ್ಕಮ್ಮನೇ ಇವನ್ನೆಲ್ಲಾ ಸೃಷ್ಟಿ ಮಾಡ್ತಿರುವುದು ಹೌದಾದ್ರೆ ಈ ಋತು ಎದೆಯೊಡೆದುಕೊಂಡು ಸತ್ತು ಹೋಗ್ತಾಳೆ ರಮ್ಯ, ಚಿಕ್ಕಮ್ಮನ ವಿಶ್ವಾಸ ದ್ರೋಹವನ್ನು ತಡೆಯುವ ಶಕ್ತಿ ನನಗಿಲ್ಲ…’. ಋತು ಉದ್ವೇಗದಿಂದ ಗಳಗಳನೆ ಅತ್ತಳು. ಅವಳನ್ನು ಸಮಾಧಾನ ಪಡಿಸುವಷ್ಟರಲ್ಲಿ ರಮ್ಯಳಿಗೆ ಸಾಕುಸಾಕಾಯಿತು. ಆದರೆ ಕಲಾವತಿಯ ಮೇಲೆ ಹೊತ್ತಿಕೊಂಡ ಅನುಮಾನದ ಕಿಡಿ ಆರಲಿಲ್ಲ. ಸ್ವಲ್ಪ ಹೊತ್ತಿಗೆ ಹೇಮಂತನ ಕರೆ ಮೊಬೈಲಿನಲ್ಲಿ ಬಂತು.

‘ಓ….ನಿನ್ನ ಹೀರೋ ಕಾಲ್ ಮಾಡಿದ್ದಾನೆ ನೋಡು, ಅವ್ನ ಜೊತೆ ಮಾತನಾಡಿ ರಿಲ್ಯಾಕ್ಸ್ ಆಗು, ನಂಗೆ ಸುಸ್ತಾಗ್ತಿದೆ, ಮಲಗ್ತೀನಿ…’ ಎಂದಳು ರಮ್ಯ.

ಅತ್ತಲಿಂದ ಹೇಮಂತನ ಧ್ವನಿ ಕೇಳಿದಾಗ ಗೆಲುವಾದಳು ಋತು. ಮಂಚದಿಂದ ಇಳಿದವಳು ತುಸು ದೂರ ಹೋಗಿ ಮಾತಿಗೆ ತೊಡಗಿದಳು.

ಹೇಮಂತ ತಾನು ಅವರೊಂದಿಗೆ ಬರಲಾಗದೇ ಇದ್ದುದಕ್ಕೆ ಕ್ಷಮೆ ಕೇಳಿದ.

ಋತು ಬಂಗಲೆಯಲ್ಲಿ ನಡೆದ ಸಂಪಿಗೆ ಮರಕ್ಕೆ ಬೆಂಕಿ ಹೊತ್ತಿಕೊಂಡ